ಅಧ್ಯಕ್ಷರು: ಆ ಪ್ರಶ್ನೆಯಿಂದ ಮುಂದಕ್ಕೆ ಹೋಗಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ಶ್ರೀ ಭರಮ ಗೌಡ ಆಲಗೌಡ ಕಾಗೆ..

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಒಂದು ಸೀರಿಯಸ್ ವಿಚಾರ ಇದೆ.

ಅಧ್ಯಕ್ಷರು: ನಾನು ಮುಂದಕ್ಕೆ ಹೋಗಿದ್ದೇನೆ. ಇನ್ನೂ ಪ್ರಶ್ನೆಗಳು ಇದ್ದಾವೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಖಂಡ್ರೆ: ಇಷ್ಟೆಲ್ಲಾ ಸಮಯ ಕೊಟ್ಟಿದ್ದೀರಿ. ನಾನು ಒಂದು ಸಬ್ ಕ್ವೆಶ್ಚನ್ ಕೇಳುವುದಿಲ್ಲ. ಏಕೆ ಕೇಳುತ್ತಿದ್ದೇನೆ ಎಂದರೆ....

ಅಧ್ಯಕ್ಷರು: ಮಾನ್ಯ ಪ್ರಕಾಶ್ ಖಂಡ್ರೆಯವರೇ, ದಯಮಾಡಿ ಕುಳಿತುಕೊಳ್ಳಬೇಕು. ಆಯಿತು. ಮಾನ್ಯ ರೇವು ನಾಯಕ್ ಬೆಳಮಗಿ ಅವರು.. ದಯಮಾಡಿ ಕೇಳಿ.

ಶ್ರೀ ರೇವು ನಾಯಕ್ ಬೆಳಮಗಿ: ಸನ್ಮಾನ್ಯ ಅಧ್ಯಕ್ಷರೆ, 1231 ಪ್ರಶ್ನೆಯನ್ನು ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಉತ್ತರ ಕೊಡುವವರು ಯಾರು? ತಾವು ಏನೋ ಹೇಳಿದಿರಿ. ಮಾನ್ಯ ಸಮಾಜ ಕಲ್ಯಾಣ ಸಚಿವರೇ ಇಲ್ಲ. ಅದಕ್ಕೆ ಉತ್ತರ ಕೊಡುವವರು ಯಾರು?

ಅಧ್ಯಕ್ಷರು: ಸಮಾಜ ಕಲ್ಯಾಣ ಸಚಿವರು ಇಲ್ಲವೇ? ಬರುತ್ತಿದ್ದಾರೆ...

ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಳವೆ ಬಾವಿ ಮಂಜೂರಾತಿಯಾಗಿರುವ ಬಗ್ಗೆ

119 (1231) ಶ್ರೀ ರೇವುನಾಯಕ್ ಬೆಳಮಗಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಗೆ 2003–04 ಮತ್ತು 2004–05ನೇ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರಿಗೆ ಎಷ್ಟು ಕೊಳವೆಬಾವಿ ಮಂಜೂರಾಗಿವೆ (ವಿಧಾನಸಬಾ ಕ್ಷೇತ್ರವಾರು ಮಾಹಿತಿ ನೀಡುವುದು) ;

ಆ) ಕಮಲಾಪುರ ಮತಕ್ಷೇತ್ರದಲ್ಲಿ ಮಂಜೂರಾಗಿ ಕೊರೆಯದೆ ಬಾಕಿ ಇರುವ ಕೊಳವೆಬಾವಿಗಳು ಎಷ್ಟು ;

ಇ) ಕೊರೆಯದೇ ಇರಲು ಕಾರಣಗಳೇನು ;

ಈ) ಯಾವಾಗ ಕೊರೆಯಲಾಗುವುದು ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ವಿಧಾನಸಭಾ ಕ್ಷೇತ್ರವಾರು ಮಾಹಿತಿ ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಆ) ಕಮಲಾಪುರ ಮತ ಕ್ಷೇತ್ರದಲ್ಲಿ 2003–04ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಪರಿಶಿಷ್ಟ ಜಾತಿಗೆ 41 ಮತ್ತು ಪರಿಶಿಷ್ಟ ವರ್ಗಕ್ಕೆ 06 ಕೊಳವೆಬಾವಿಗಳು ಮಂಜೂರಾಗಿದ್ದು, ಈ ಪೈಕಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿದ 41 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಪರಿಶಿಷ್ಟ ವರ್ಗಕ್ಕೆ 06 ಕೊಳವೆ ಬಾವಿಗಳಿಗೆ ನಿಗದಿಪಡಿಸಿದ ಹೆಚ್ಚುವರಿ ಅನುದಾನ ಬಿಡುಗಡೆಯಾಗದ ಕಾರಣ ಸದರಿ 06 ಕೊಳವೆಬಾವಿಗಳನ್ನು ಕೊರೆಯಲಾಗಿರುವುದಿಲ್ಲ. ಸಾಮೂಹಿಕ

ನೀರಾವರಿ ಕೊಳವೆಬಾವಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ ಮಂಜೂರಾದ 02 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

2004–05 ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ 25 ಮತ್ತು ಪರಿಶಿಷ್ಟ ವರ್ಗಕ್ಕೆ 03 ಕೊಳವೆ ಬಾವಿಗಳು ಮಂಜೂರಾಗಿದ್ದು ಕಾರ್ಯ ಪ್ರಗತಿಯಲ್ಲಿದೆ.

ಸಾಮೂಹಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ.

ಇ) 2003–04ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಕ್ಕೆ ನಿಗದಿಪಡಿಸಿದ ಗುರಿಯಂತೆ 06 ಕೊಳವೆಬಾವಿಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆಯಾಗದ ಕಾರಣ ಸದರಿ 06 ಕೊಳವೆಬಾವಿಗಳನ್ನು ಕೊರೆಯಲಾಗುವುದಿಲ್ಲ

ಈ) ಪರಿಶಿಷ್ಟ ವರ್ಗಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆಯಾದಲ್ಲಿ ಕೊರೆಯಲಾಗುವುದು.

2004–05ನೇ ಸಾಲಿನಲ್ಲಿ ಅನುಬಂಧ–Iರಲ್ಲಿ ಕ್ಷೇತ್ರವಾರು ನಿಗದಿಪಡಿಸಿದ ಗುರಿಯಂತೆ ಮಾರ್ಚ್ 2005ರ ಮಾಹೆಯ ಅಂತ್ಯದೊಳಗೆ ಎಲ್ಲಾ ಕೊಳವೆಬಾವಿಗಳನ್ನು ಕೊರೆಯಲಾಗುವುದು.

ಅನುಬಂಧ-1

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

2003–04 ಮತ್ತು 2004–05ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಮಂಜೂರಾದ ಕೊಳವೆ ಬಾವಿಗಳ ಕ್ಷೇತ್ರವಾರು ವಿವರ

ವಿಧಾನ ಮಂಡಲದ ಚುಕ್ಕೆ ಪ್ರಶ್ನೆ ಸಂಖ್ಯೆ: 1231ಕ್ಕೆ ಉತ್ತರ

ಕ್ರ. ಸಂ.	ತಾಲ್ಲೂಕುವಾರು ಕ್ಷೇತ್ರವಾರು	2003–04								2004–05					
		ವೈ.ನಿ.ಕೊ.ಬಾ.				ಗಂ.ಕ.ಯೋ				ವೈ.ನಿ.ಕೊ.ಬಾ.				ಗಂ.ಕ.ಯೋ.	
		ಗುರಿ		ಸಾಧನೆ		ಗುರಿ		ಸಾಧನೆ		ಗುರಿ		ಸಾಧನೆ		ಗುರಿ	
		ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ. ವರ್ಗ
1.	ಗುಲ್ಬರ್ಗಾ	31	3	5	0	0	0	0	0	2	0	0	0	2004–05ನೇ ಸಾಲಿನಲ್ಲಿ ಗುರಿ ನಿಗದಿಪಡಿಸಿರುವುದಿಲ್ಲ	
2.	ಸೇಡಂ	26	2	26	2	0	0	0	0	22	3	0	0		
3.	ಜೇವರ್ಗಿ	36	3	38	1	0	0	0	2	19	3	0	0		
4.	ಅಫಜಲ್‌ಪೂರ	23	3	24	0	0	0	0	0	17	3	0	0		
5.	ಆಳಂದ	22	3	26	0	2	0	2	0	20	3	0	0		
6.	ಚಿಂಚೋಳಿ	28	3	30	1	0	0	0	0	31	5	0	0		
7.	ಯಾದಗಿರಿ	27	3	24	3	0	0	0	0	17	3	0	0		
8.	ಸುರಪೂರ	32	3	32	3	0	0	0	0	19	3	0	0		
9.	ಚಿತ್ತಾಪುರ	34	3	35	0	2	0	2	0	22	3	0	0		
10.	ಶಹಾಪುರ	26	2	27	1	0	2	0	0	20	3	0	0		
11.	ಕಮಲಾಪುರ	41	6	41	0	2	0	2	0	25	3	0	0		
12.	ಗುರುಮಿಡಕಲ್	114	6	113	6	3	0	3	0	19	3	0	0		
13.	ಶಹಬಾದ್	27	5	40	0	0	0	0	0	20	3	0	0		
	ಒಟ್ಟು	467	45	461	17	9	2	9	2	253	38	0	0		

ಶ್ರೀ ರೇವುನಾಯಕ್ ಬೆಳಮಗಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರಗಳನ್ನು ಒದಗಿಸಿದ್ದಾರೆ. "ಕ್ಷೇತ್ರವಾರು ನಿಗದಿಪಡಿಸಿದ ಗುರಿಯಂತೆ 2005ರ ಮಾರ್ಚ್ ಮಾಹೆಯ ಅಂತ್ಯದೊಳಗೆ ಎಲ್ಲಾ ಕೊಳವೆಬಾವಿಗಳನ್ನು ಕೊರೆಸಲಾಗುವುದು" ಎಂದು ಉತ್ತರದಲ್ಲಿ ತಿಳಿಸಿರುವುದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ, ಕ್ಷೇತ್ರವಾರು ಒದಗಿಸಿರುವ ಮಾಹಿತಿ ಗಮನಿಸಿದಲ್ಲಿ, ಕೊಳವೆಬಾವಿ ಸೌಲಭ್ಯ ಒದಗಿಸಿಕೊಡುವಲ್ಲಿ ತಾರತಮ್ಯವೆಸಗಿರುವುದು ಕಂಡುಬರುತ್ತದೆ. ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅನುಕೂಲವಾಗುವ ಯೋಜನೆಗಳೆಂದರೆ, ಒಂದು ಗಂಗಾಕಲ್ಯಾಣ ಮತ್ತೊಂದು ಭೂ ಒಡೆತನ ಯೋಜನೆಯಾಗಿದೆ. ಇದು ಸರ್ಕಾರಕ್ಕೆ ಒಳ್ಳೆಯ ಹೆಸರು ತರುವಂಥ ಯೋಜನೆಗಳಾಗಿವೆ. ತಾವು ಒದಗಿಸಿರುವ ಕ್ಷೇತ್ರವಾರು ಮಾಹಿತಿಯಲ್ಲಿ ನನ್ನ ಕಮಲಾಪುರ ಕ್ಷೇತ್ರಕ್ಕೆ 2003–04ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿಯಲ್ಲಿ ಪರಿಶಿಷ್ಟ ಜಾತಿಯವರಿಗೆ 41 ಗುರಿ ನಿಗದಿಪಡಿಸಿದ್ದರೆ, ಪಕ್ಕದ ಗುರುಮಿಠಕಲ್ ಕ್ಷೇತ್ರಕ್ಕೆ 114 ಗುರಿ ನಿಗದಿಪಡಿಸುವ ಮೂಲಕ ತಾರತಮ್ಯವೆಸಗಲಾಗಿದೆ. ಈ ತಾರತಮ್ಯವನ್ನು ಸರಿಪಡಿಸಬೇಕು ತಾರತಮ್ಯವನ್ನು ಹೇಗೆ ಭರಿಸುತ್ತೀರಿ ಎಂಬುದನ್ನು ತಮ್ಮಿಂದ ತಿಳಿಯಬಯಸುತ್ತೇನೆ. ಅಲ್ಲದೆ, ಈ ಹಿಂದೆ ಗಂಗಾಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಮಂಜೂರು ಮಾಡಿ ಕೊರೆದಾಗ ಯಶಸ್ವಿಯಾಗಿವೆ ಸದರಿ ಯೋಜನೆಯಡಿ ಕೊಳವೆಬಾವಿ ಕೊರೆಸಲು ಪ್ರತಿ ಫಲಾನುಭವಿಗೆ 65 ಸಾವಿರ ರೂಪಾಯಿಗಳಷ್ಟು ಸಬ್ಸಿಡಿ ಹಣ ನಿಗದಿಪಡಿಸಿದ್ದರೂ 'ಒಬ್ಬರಿಗೆ 15 ಸಾವಿರ ತುಂಬಿರಿ, ಮತ್ತೊಬ್ಬರಿಗೆ 20 ಸಾವಿರ ತುಂಬಿರಿ, ಹಾಗೆ ಇನ್ನೊಬ್ಬರಿಗೆ 25 ಸಾವಿರ ತುಂಬಿರಿ' ಎಂದು ಮೇಲಿಂದ ಮೇಲೆ ಪರಿಶಿಷ್ಟ ಫಲಾನುಭವಿಗಳಿಗೆ ನೋಟೀಸ್ ನೀಡುತ್ತಿದ್ದಾರೆ. ಅವರು ಬಡವರು ಮತ್ತು ಕೂಲಿ ಕಾರ್ಮಿಕರಾಗಿದ್ದು, ತಮ್ಮ ಬಳಿ ಅರ್ಧ, ಒಂದು ಎಕರೆ ಜಮೀನು ಇಟ್ಟುಕೊಂಡು ಕೊಳವೆಬಾವಿಗಳನ್ನು ಕೊರೆಸಿಕೊಂಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಹಣ ಪಾವತಿಸಬೇಕೆಂದು ಮೇಲಿಂದ ಮೇಲೆ ನೋಟೀಸ್‌ಗಳನ್ನು ಕಳುಹಿಸುತ್ತಿರುವುದರಿಂದ ಹಣವನ್ನು ಅವರಿಂದ ಭರಿಸುವುದಕ್ಕಾಗುತ್ತಿಲ್ಲ. ಇದರಿಂದಾಗಿ ಕೊರೆದಿರುವ ಎಲ್ಲಾ ಕೊಳವೆಬಾವಿಗಳನ್ನು ಮುಚ್ಚುವ ಪ್ರಸಂಗ ಉದ್ಭವಿಸಿದೆ. ಈ ದಿಸೆಯಲ್ಲಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಗಂಗಾಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಕೊರೆಸಲು ನಿಗದಿಪಡಿಸಿರುವ 65 ಸಾವಿರ ರೂಪಾಯಿಗಳ ಸಬ್ಸಿಡಿ ಹಣ ಸಾಕಾಗುವುದಿಲ್ಲವಾದ್ದರಿಂದ ಅದನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದಲ್ಲಿ ಸದರಿ ವರ್ಗದವರಿಗೆ ಉಪಕಾರ ಮಾಡಿದಂತಾಗುತ್ತದೆ ಮತ್ತು ಯೋಜನೆಯನ್ನು ಸಹ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಿದಂತಾಗುತ್ತದೆಂದು ಹೇಳಬಯಸುತ್ತೇನೆ. ಆದುದರಿಂದ ಯೋಜನೆಯಲ್ಲಾಗಿರುವ ತಾರತಮ್ಯವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಾ ಈ ಹಿಂದೆಯೂ ಕೂಡ ತಾರತಮ್ಯವಾಗಿದ್ದಾಗ ಅಂದಿನ ಸಮಾಜ ಕಲ್ಯಾಣ ಸಚಿವರಾಗಿದ್ದ ಕೃಷ್ಣಪ್ಪನವರನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಬೇಕಾಗುತ್ತದೆ. ಅವರು ಆಗಿರುವ ತಾರತಮ್ಯವನ್ನು ಸರಿಪಡಿಸುವುದಾಗಿ ತಿಳಿಸಿ, ವಿಶೇಷವಾಗಿ ಹೆಚ್ಚಿನ ಪ್ರಮಾಣದಲ್ಲಿ ಕೊಳವೆಬಾವಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರು. ಅದೇ ರೀತಿ ತಾವೂ ಸಹ ದೊಡ್ಡ ಮನಸ್ಸು ಮಾಡುವ ಮೂಲಕ ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರ ಅತ್ಯಂತ

ಹಿಂದುಳಿದ ಕ್ಷೇತ್ರವಾಗಿರುವುದರಿಂದ ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಬಹಳಷ್ಟು ಸಂಖ್ಯೆಯಲ್ಲಿರುವುದರಿಂದ ಅವರ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಕೊಳವೆಬಾವಿಗಳನ್ನು ಮಂಜೂರು ಮಾಡಿಸಿಕೊಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಡಾ॥ ವೈ. ನಾಗಪ್ಪ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವುದಕ್ಕೆ ನನ್ನದು ಎರಡು ಮಾತಿಲ್ಲ. One of the most and best vital schemes is our department. I do accept. ಈ ಕುರಿತು ನಾನು ಇಲಾಖಾಧಿಕಾರಿಗಳೊಂದಿಗೆ ಮೊದಲೇ ಚರ್ಚಿಸಿದ್ದು ಸದರಿ ಯೋಜನೆಯಡಿ ಒದಗಿಸಿಕೊಡುತ್ತಿರುವ ಅನುದಾನ ಸಾಕಾಗುವುದಿಲ್ಲವೆಂದು ಪ್ರಸ್ತಾಪಿಸಿದ್ದೇನೆ. ಬಹುಶಃ ಹದಿನೈದು ವರ್ಷಗಳ ಹಿಂದೆ ಈ ಅನುದಾನ ನಿಗದಿಪಡಿಸಲಾಗಿತ್ತು. ಈಗ ತಮ್ಮೆಲ್ಲರಿಗೂ ತಿಳಿದಿರುವಂತೆ ಜಮೀನಿನ ಬೆಲೆ ಹೆಚ್ಚಾಗಿರುವಂತೆ ಪಂಪ್‌ಸೆಟ್ಟು, ಮೋಟಾರುಗಳ ಬೆಲೆಯೂ ಹೆಚ್ಚಾಗಿದೆ. ಅದಕ್ಕೋಸ್ಕರ, ಅಧಿಕಾರಿಗಳೊಂದಿಗೆ ಚರ್ಚಿಸಿದ್ದನ್ನು ತಮ್ಮ ಗಮನಕ್ಕೆ ತರುತ್ತಾ, ಯೋಜನೆಗೆ ನಿಗದಿಪಡಿಸಿರುವ ಸಬ್ಸಿಡಿ ಹಣವನ್ನು ಒಂದು ಲಕ್ಷ ರೂಪಾಯಿವರೆಗೆ ಹೆಚ್ಚಿಸುವ ಕುರಿತಂತೆ ಈಗಾಗಲೇ ನಾವು ಚಿಂತನೆ ಮಾಡಿದ್ದೇವೆಂಬುದನ್ನು ತಮಗೆ ಹೇಳಬಯಸುತ್ತಿದ್ದೇನೆ. ಏಕೆಂದರೆ, ಈ ಸಮಾಜದ ಏಳಿಗೆಗೆ ಕೊಡಮಾಡಿರುವ ಯೋಜನೆಗಳಲ್ಲಿ ಗಂಗಾಕಲ್ಯಾಣ ಯೋಜನೆಯು, actually, this is one of the most vital schemes ಆಗಿದೆ. ಆರ್ಥಿಕವಾಗಿ ತೀರಾ ಕೆಳಮಟ್ಟದಲ್ಲಿರುವ ಹರಿಜನ–ಗಿರಿಜನರನ್ನು ಮೇಲೆತ್ತಬೇಕಾದರೆ, ಅವರಿಗೆ ನಾವು ಜಮೀನು ಸೌಲಭ್ಯ ಒದಗಿಸಿಕೊಟ್ಟು, ಅಲ್ಲಿ ಕೊಳವೆಬಾವಿ ಕೊರೆದು ಪಂಪುಸೆಟ್ಟುಗಳನ್ನು ಅಳವಡಿಸಿಕೊಟ್ಟಾಗ ಮಾತ್ರ ನಿಜವಾಗಿಯೂ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ. ನಮ್ಮ ಇಲಾಖೆಗೆ ಸಾಮಾಜಿಕ ಬದ್ಧತೆಯಿರುವುದರಿಂದ ಖಂಡಿವಾಗಿಯೂ ಕೊಳವೆಬಾವಿ ಕೊರೆಸಲು ನಿಗದಿಪಡಿಸಿರುವ ಹಣವನ್ನು ಹೆಚ್ಚು ಮಾಡುತ್ತೇವೆ. ಮತ್ತೊಂದು ವಿಚಾರವೆಂದರೆ, ಮಾನ್ಯ ಸದಸ್ಯರು ಮಾತನಾಡುತ್ತಾ, ತಮ್ಮ ಕ್ಷೇತ್ರದಲ್ಲಿ ಕಡಿಮೆ ಕೊಳವೆಬಾವಿಗಳನ್ನು ಮಂಜೂರು ಮಾಡಿ ಪಕ್ಕದ ಬೇರೆ ಕ್ಷೇತ್ರದಲ್ಲಿ ಹೆಚ್ಚು ಕೊಳವೆಬಾವಿಗಳನ್ನು ಮಂಜೂರು ಮಾಡಿ ತಾರತಮ್ಯವೆಸಗಲಾಗಿದೆ ಎಂದು ತಿಳಿಸಿರುವುದನ್ನು ನಾನು ಪರಿಶೀಲಿಸುತ್ತೇನೆ. ಇದರ ಬಗ್ಗೆ ಹೇಳುವುದಾದರೆ, ಬಹುಶಃ ಆ ಕ್ಷೇತ್ರದಲ್ಲಿ ಪರಿಶಿಷ್ಟರ ಜನಸಂಖ್ಯೆ ಜಾಸ್ತಿಯಿರಬಹುದು. ಫಲಾನುಭವಿಗಳ ಸಂಖ್ಯೆ ಹೆಚ್ಚಿರಬಹುದು. ಈ ಹಿನ್ನೆಲೆಯಲ್ಲಿ ಹೆಚ್ಚು ಕೊಳವೆಬಾವಿಗಳನ್ನು ಮಂಜೂರು ಮಾಡಿರಬಹುದು. ಪರಿಶಿಷ್ಟರಿಗೆ ಈ ಸೌಲಭ್ಯ ಒದಗಿಸಿಕೊಡಬೇಕೆಂದು ಕೇಳಲು ನಿಮಗೆ ಹಕ್ಕಿರುವಂತೆ, ಸೌಲಭ್ಯ ಒದಗಿಸಿಕೊಡಲು ನಮಗೂ ಹಕ್ಕಿದೆ. ಆದುದರಿಂದ, ಈ ಸಲ ತಮ್ಮ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆಬಾವಿಗಳನ್ನು ಮಂಜೂರು ಮಾಡಿಕೊಡುವುದಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು: ರೇವುನಾಯಕ್‌ರವರೇ, ತಾವು ಬಹಳ ಕೇಳಿದ್ದೀರಿ. ಇನ್ನೂ ಸಾಕಷ್ಟು ಪ್ರಶ್ನೆಗಳಿವೆ.

ಶ್ರೀ ರೇವುನಾಯಕ್ ಬೆಳಮಗಿ: ಅಧ್ಯಕ್ಷರೆ, ನಾನು ಮೂರು ಸಲ ಕಮಲಾಪುರ ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಿ ಬಂದಿದ್ದೇನೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಕೇಳುತ್ತೇನೆ. ನಾನು ಬೇರೆ ಯಾವಾಗಲೂ ಅಡ್ಡಿಬರುವುದಿಲ್ಲ. ಇತರ ಸಂದರ್ಭಗಳಲ್ಲಿ ಮಾತನಾಡಬೇಕೆಂದಾಗ ಎದ್ದು ನಿಂತು ಮಾತನಾಡುವಂತಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಉದ್ಧಾರಕ್ಕಾಗಿ

ಹಮ್ಮಿಕೊಂಡಿರುವ ಗಂಗಾಕಲ್ಯಾಣ ಮತ್ತು ಭೂ ಒಡೆತನ ಯೋಜನೆಗಳು ನನ್ನ ಅಚ್ಚುಮೆಚ್ಚಿನ ಯೋಜನೆಗಳಾಗಿವೆ. ಬಡವರಾದ ಪರಿಶಿಷ್ಟರ ಪರಿಸ್ಥಿತಿ ಏನೆಂದು ನಿಮಗೂ ಗೊತ್ತಿದೆ. ನಾನು ಈ ಕುರಿತು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನನ್ನ ಕ್ಷೇತ್ರದ ಪರಿಶಿಷ್ಟರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಳವೆಬಾವಿ ಸೌಲಭ್ಯ ಒದಗಿಸಿಕೊಟ್ಟರೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳ ಪರಿಸ್ಥಿತಿ ಬಗ್ಗೆ ಸಚಿವರಾದ ಸಿಂಧ್ಯಾರವರಿಗೆ ಗೊತ್ತಿದೆ. ಇವು ಪೂರ್ತಿ ಹಿಂದುಳಿದ ಜಿಲ್ಲೆಗಳಾಗಿರುವುದರಿಂದ ತಾವು ಹೆಚ್ಚಿನ ಆಸಕ್ತಿ ವಹಿಸುವ ಮೂಲಕ ಪರಿಶಿಷ್ಟರ ಏಳಿಗೆಗೆ ಅನುಕೂಲ ಕಲ್ಪಿಸಿಕೊಡಬೇಕು. ನನ್ನ ಕ್ಷೇತ್ರದ ಜನರಿಗೆ ಅನುಕೂಲವಾಗಲಿ ಎಂಬ ಒಂದೇ ದೃಷ್ಟಿಯಿಂದ ಕೇಳುತ್ತಿದ್ದೇನೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುವ ಬಾಬುರಾವ್ ಮುಡಬಿಯವರು ಉತ್ತಮ ಅಧಿಕಾರಿಯಾಗಿದ್ದು ಪರಿಶಿಷ್ಟರ ಏಳಿಗೆಗೆ ಸಕಾಲದಲ್ಲಿ ಸೌಲಭ್ಯ ಒದಗಿಸಿಕೊಡುತ್ತಿರುವುದರಿಂದ ಅವರ ಬಗ್ಗೆ ಎರಡು ಮಾತಿಲ್ಲ. ಆದರೂ ಕೂಡ ನನ್ನ ಕ್ಷೇತ್ರದಲ್ಲಿ ಪರಿಶಿಷ್ಟರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಳವೆಬಾವಿ ಸೌಲಭ್ಯ ಒದಗಿಸಿಕೊಡುವುದಾಗಿ ಮಾನ್ಯ ಸಚಿವರು ಆಶ್ವಾಸನೆ ನೀಡಿರುವುದರಿಂದ, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಿಗೆ ಆದ್ಯತೆ ಮೇರೆಗೆ ಹೆಚ್ಚಿನ ಪ್ರಮಾಣದಲ್ಲಿ ಸೌಲಭ್ಯ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟರಿಗಾಗಿ ಕೊರೆಸಲಾದ ಕೊಳವೆಬಾವಿಗಳಿಗೆ ಇದುವರೆಗೂ ಪಂಪ್‌ಸೆಟ್ಟು ಅಳವಡಿಸಿ ವಿದ್ಯುತ್ ಸೌಲಭ್ಯ ಒದಗಿಸಿರುವುದಿಲ್ಲ. ಗಂಗಾಕಲ್ಯಾಣ ಯೋಜನೆಯಡಿ ಒಂದು ಕೊಳವೆಬಾವಿ ಕೊರೆಸಲು ನಿಗದಿಪಡಿಸಿರುವ 65 ಸಾವಿರ ರೂಪಾಯಿಗಳ ಸಬ್ಸಿಡಿ ಹಣವೇನಿದೆ, ಇದರಿಂದ ಪರಿಶಿಷ್ಟರಿಗೆ ಕೊಳವೆಬಾವಿ ಸೌಲಭ್ಯ ಒದಗಿಸಿಕೊಡಲು ಸಾಧ್ಯವಾಗುತ್ತಿಲ್ಲ. ಯೋಜನಾ ವೆಚ್ಚ ಜಾಸ್ತಿಯಾಗುತ್ತಿದ್ದು, ಹೆಚ್ಚುವರಿ ಖರ್ಚಾದ ಹಣವನ್ನು ಫಲಾನುಭವಿಗಳ ಮೇಲೆ ವಿಧಿಸಿದ್ದಾರೆ. ಬಡ ಪರಿಶಿಷ್ಟರಿಂದ ಭೂಮಿಯನ್ನು ಬರೆಸಿಕೊಳ್ಳುವ ಮೂಲಕ ಹೆಚ್ಚುವರಿ ಸಾಲ ಒದಗಿಸಿಕೊಡುವುದಾಗಿ ಹೇಳಿದ್ದಾರೆ. ಈ ವರ್ಗದ ಬಗ್ಗೆ ಅಪಾರ ಕಳಕಳಿ ಹೊಂದಿರುವ, ಹಿಂದುಳಿದ ವರ್ಗಕ್ಕೆ ಸೇರಿರುವ ಮಾನ್ಯ ಮುಖ್ಯಮಂತ್ರಿಗಳಾದ ತಾವೂ ಕೂಡ ಯೋಜನೆಯ ಹಣವನ್ನು ಒಂದು ಲಕ್ಷ ರೂಪಾಯಿಗೆ ಹೆಚ್ಚಿಸುವುದಾಗಿ ತಿಳಿಸಿದ್ದೀರಿ. ಆದುದರಿಂದ, ದಯಮಾಡಿ ಗಂಗಾಕಲ್ಯಾಣ ಯೋಜನೆಗೆ ನಿಗದಿಪಡಿಸಿರುವ ಮೊತ್ತವನ್ನು ಒಂದು ಲಕ್ಷ ರೂಪಾಯಿಗೆ ಹೆಚ್ಚಿಸಬೇಕೆಂದು ಕೋರುತ್ತಾ, ಜೊತೆಗೆ, ಈಗಾಗಲೇ ಕೊರೆದಿರುವ ಕೊಳವೆಬಾವಿಗಳಿಗೆ ಕೂಡಲೇ ಪಂಪುಸೆಟ್ಟುಗಳನ್ನು ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸವನ್ನು ತಾವು ತ್ವರಿತ ಗತಿಯಲ್ಲಿ ಹಮ್ಮಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಒತ್ತಾಯಿಸುತ್ತಿದ್ದೇನೆ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಆಗಲೇ ಮಾನ್ಯ ಸದಸ್ಯರಾದ ರೇವುನಾಯಕ್ ಬೆಳಮಗಿಯವರು ಹೇಳಿದ್ದರಲ್ಲಿ ಎರಡು ಮಾತಿಲ್ಲ. ಖಂಡಿತವಾಗಿಯೂ ಆ ಕುರಿತು ಗಮನಹರಿಸುತ್ತೇನೆ. ಏಕೆಂದರೆ, ನನಗೂ ಗೊತ್ತಿದೆ. Raichur and Gulbarga, they are

the districts which are most backward classes. They have been already recognised by Nanjundappa's Commission. A special grant also is accorded. ಅದರ ಜೊತೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ನಿಮ್ಮ ಜಿಲ್ಲೆಗೆ ಬಹಳಷ್ಟು ಒಳ್ಳೆಯ ರೀತಿಯಿಂದ ಸೇವೆ ಸಲ್ಲಿಸುತ್ತಿದ್ದೇವೆ. ಎರಡನೆಯದಾಗಿ, ಶಾಸಕರಾದ ಆಂಜನೇಯರವರು ಮಾತನಾಡುತ್ತಾ ಹೇಳಿರುವ ಮಾತು ನಿಜ. ಅದರ ಬಗ್ಗೆ ನಾನು ಈಗಾಗಲೇ ತೀರ್ಮಾನ ಕೈಗೊಂಡಿದ್ದೇನೆ. ಸದ್ಯಕ್ಕೆ ಈಗಾಗಲೇ ಕೊರೆದಿರುವ 6318 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ಮೊನ್ನೆ ಹಣಕಾಸು ಸಚಿವರಾಗಿರುವ ಉಪ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿದ್ದು, ಮುಂಬರುವ ಏಪ್ರಿಲ್ ತಿಂಗಳೊಳಗೆ ಅಷ್ಟೂ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಹಾನಗಲ್ ತಾಲ್ಲೂಕಿನಲ್ಲಿ ವಸತಿ ನಿಲಯ ಮಂಜೂರಾತಿ ಬಗ್ಗೆ

120 (1236) ಶ್ರೀ ಉದಾಸಿ ಸಿ.ಎಂ. (ಹಾನಗಲ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಾನಗಲ್ ತಾಲ್ಲೂಕು ಚಿಕ್ಕಾಂಶಿ ಹೊಸೂರು ಗ್ರಾಮದ ಪರಿಶಿಷ್ಟ ಪಂಗಡದವರು ವಸತಿ ನಿಲಯ ಮಂಜೂರಾಗಿದೆಯೇ : ಮಂಜೂರಾಗಿದ್ದರೆ ಅದರ ಮೊತ್ತ ಎಷ್ಟು, ಕೆಲಸ ಯಾವಾಗ ಮಾಡಲಾಗುವುದು ;

ಆ) ಹಾಸ್ಟೆಲ್‌ಗಳನ್ನು ಮಂಜೂರು ಮಾಡುವುದು ಸರ್ಕಾರದ ಪ್ರಸ್ತಾವನೆಯಲ್ಲಿದೆಯೇ :

ಇ) ಹಾನಗಲ್ ತಾಲ್ಲೂಕು ಅರಳೇಶ್ವರ–ಕಾಂಚಿನಗಳೂರ–ಕೂಸನೂರ ಗ್ರಾಮಗಳಲ್ಲಿ ಹಾಸ್ಟೆಲ್ ಪ್ರಾರಂಭ ಮಾಡಲು ಸರ್ಕಾರದ ನೀತಿ ಏನು?

ಶ್ರೀ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ವಿದ್ಯಾರ್ಥಿನಿಲಯ ಕಟ್ಟಡ ಕಾಮಗಾರಿಗೆ ರೂ. 45.00 ಲಕ್ಷಗಳ ಅಂದಾಜು ವೆಚ್ಚಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿ ಕೇಂದ್ರದ ಪಾಲಿನಲ್ಲಿ ರೂ. 12.50 ಲಕ್ಷಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳನ್ವಯ ಟೆಂಡರ್ ಮೂಲಕ ಏಜೆನ್ಸಿಯವರನ್ನು ನೇಮಿಸಿ ಪ್ರಸಕ್ತ ಸಾಲಿನಲ್ಲಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) 2004–05ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸದಿರಲು.

ಇ) ನಿಲುವು ತೆಗೆದುಕೊಳ್ಳಲಾಗಿದೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಹಾನಗಲ್ ತಾಲ್ಲೂಕು ಚಿಕ್ಕಾಂಶಿ ಹೊಸೂರ ಗ್ರಾಮದ ಪರಿಶಿಷ್ಟ ಪಂಗಡದವರ ವಸತಿ ನಿಲಯ ಕಟ್ಟಡದ ಕಾಮಗಾರಿಗೆ ಕೇಂದ್ರ ಸರ್ಕಾರ ತನ್ನ ಪಾಲಾದ 12.50 ಲಕ್ಷ ರೂಪಾಯಿಗಳಷ್ಟು ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿ ಎಂಟು ತಿಂಗಳಾಗಿದ್ದರೂ ಕಟ್ಟಡ ಕಾಮಗಾರಿ ಕೆಲಸ ಇನ್ನೂ ಪ್ರಾರಂಭಿಸಿಲ್ಲದಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಸದರಿ ಕಟ್ಟಡದ ಕಾಮಗಾರಿ ಕೆಲಸ ಯಾವ ಕಾರಣಕ್ಕಾಗಿ ವಿಳಂಬವಾಗಿದೆ? ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸುತ್ತೀರಿ? ದಿನಾಂಕ ಗೊತ್ತುಪಡಿಸಿರುವುದನ್ನು